**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**
**ಸಿ.ಸಿ.ನಂ. 984/2022**

ದಿನಾಂಕಃ 28-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ2 ಸಿ.ಡಬ್ಲ್ಯೂಃ **8**

| | |
|---|---|
| ಸಾಕ್ಷಿಯ ಹೆಸರು | ಃ ಆನಂದ್ |
| ಗಂಡನ ಹೆಸರು | ಃ ಚಂದ್ರಯ್ಯ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಕೂಲಿ |
| ವಾಸ | ಃ ಎಸ್ ಬಿದರೆ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ-**

ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ವಾಹವನ್ನು ವಶಪಡಿಸಿಕೊಂಡಿರುವುದಿಲ್ಲ. ಠಾಣೆಗೆ ಹೋದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ಅನ್ನು ಈಗಾಗಲೇ ನಿಪಿ-1, ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅಮಾನತು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ದಿಃ 11-08-2021 ರಂದು ಮದ್ಯಾಹ್ನ 3-30 ಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿಯು ಟ್ರ್ಯಾಕ್ಟರ್ ಅನ್ನು ಚಾಲನೆ ಮಾಡುತಿದ್ದು ಅದರಲ್ಲಿ ನಾನು, ಚಾಸಾ-1, 6, ಮತ್ತು ಚಾಸಾ-1 ರವರ ಮಗ ಹೇಮಂತ್ ಕಮಾರ್ ರವರು ಶವ ಸಂಸ್ಕಾರ ಮುಗಿಸಿ ವಾಪಸ್ಸು ಬರುತಿದ್ದಾಗ ಆರೋಪಿಯು ಟ್ರ್ಯಾಕ್ಟರ್ ಅನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಟ್ರ್ಯಾಕ್ಟರ್ ನ ಸ್ಟೇರಿಂಗ್ ಏಕಾಏಕಿ ತಿರುಗಿಸಿದ್ದರಿಂದ ಟ್ರ್ಯಾಲಿ ಯಲ್ಲಿ ಕುಳಿತಿದ್ದ ಹೇಮಂತ್ ಕುಮಾರ್ ರಸ್ತೆಯ ಮೇಲೆ ಬಿದ್ದ ಪರಿಣಾಮ ಆತನ ತಲೆಗೆ ಮತ್ತು ಮೈಕೈಗೆ ತೀವ್ರ ಪೆಟ್ಟಾಗಿ ಆತನನ್ನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆತ ಮೃತಪಟ್ಟಿದ್ದಾನೆಂದು ತಿಳಿಯಿತು ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನಲ್ಲಿ ನಾನು ಇದ್ದು ಅಪಘಾತವನ್ನು ನೋಡಿದ್ದೇನೆಂದರೆ ಸರಿಯಲ್ಲ. ದಿಃ 14-08-2021 ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ಅನ್ನು ಬೆಳಗ್ಗ 11-00 ರಿಂದ 12-00 ರ ವರೆಗೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 6-00 ಕ್ಕೆ ಅಪಘಾತಕೊಳ್ಳಪಟ್ಟ ವಾಹನಗಳಾದ ಟ್ರ್ಯಾಕ್ಟರ್ ಇಂಜಿನ್ ಕೆಎ-46-ಟಿ-5878 ಮತ್ತು ಟ್ರೈಲರ್ ಕೆಎ-46-5879 ಅನ್ನು ನಮ್ಮ ಮುಂದೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಃ ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

2 ನೇ  ಹೆ:ಪ್ರ:ಪ್ರ:ದ:ನ್ಯಾ:ದಂ.,ರವರು,
ಕಡೂರು.